ಅಧ್ಯಕ್ಷರು — ರಾಜ್ಯಪಾಲರ ಭಾಷಣದ ಮೇಲೆ ಈಗಾಗಲೇ ಚರ್ಚೆ ಪ್ರಾರಂಭವಾಗಿದೆ. ಆದರಲ್ಲಿ ತಾವು ಮಾತನಾಡಬೇಕಾಗಿರುವವರಿದ್ದೀರಿ. ಇಡೀ ಸಮಯವನ್ನು ಈ ಪ್ರಶ್ನೆಯ ಬಗ್ಗೆ ತಾವು ಕೇಂದ್ರೀಕರಿಸಬಹುದು. ಆಗ ಸರ್ಕಾರ ಉತ್ತರ ಕೊಡಲೇಬೇಕಾಗುತ್ತದೆ. ನಿಮ್ಮ ಭಾಷಣವನ್ನು ನಾವು ಎದುರು ನೋಡುತ್ತಿದ್ದೇವೆ. ಈಗ ದಯವಿಟ್ಟು ತಾವು ಕುಳಿತುಕೊಳ್ಳಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಮಾನ್ಯ ಹಂಪನಗೌಡರು ನಿಯಮ ೩೪ರ ಪ್ರಕಾರ ಮಾಡಿರತಕ್ಕ ಪ್ರಸ್ತಾವನೆಯ ಬಗ್ಗೆ ನಾವು ಈಗಾಗಲೇ ಎರಡು ಮೂರು ಬಾರಿ ಸಂಬಂಧಪಟ್ಟ ಶಾಸಕರು ಮತ್ತು ಲೋಕಸಭಾ ಸದಸ್ಯರು, ಮತ್ತು ರೈತ ಮುಖಂಡರುಗಳ ಜೊತೆ ತೀರ್ಮಾನ ಮಾಡಿ ಸೂಕ್ತ ಕ್ರಮವನ್ನು ಈಗಾಗಲೇ ಕೈಗೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬೆಳೆಗೆ ಮತ್ತು ಆ ಭಾಗದ ರೈತರಿಗೆ ತೊಂದರೆಯಾಗದ ರೀತಿ ಕ್ರಮ ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ.

೩ ಬೆಂಗಳೂರು ತ್ಯಾಗರಾಜನಗರದ ಪೋಲಿಸ್ ಠಾಣೆಯಂ ವ್ಯಾಪ್ತಿಯಲ್ಲಿ ಕಲ್ಲಪ್ಪ ಚಿನ್ನಪ್ಪ ಇಂಗಳೆ ಎಂಬುವರು ಕಾಣೆಯಾಗಿರುವುದು

ಶ್ರೀ ಪ್ರಭಾಕರ ಎಸ್. ರಾಣೆ (ಕಾರವಾರ).— ಬೆಂಗಳೂರು ತ್ಯಾಗರಾಜನಗರ ಪೋಲೀಸು ಠಾಣೆಯ ವ್ಯಾಪ್ತಿಯಲ್ಲಿ ಶ್ರೀ ಕಲ್ಲಪ್ಪ ಚಿನ್ನಪ್ಪ ಇಂಗಳೆ ಎಂಬುವರು ದಿನಾಂಕ ೨೭-೧೧-೮೯ರಂದು ಬೆಳಿಗ್ಗೆ ೭-೦೦ ಗಂಟೆಗೆ ಬಿ.ಹೆಚ್.ಇ.ಎಲ್. ಕಾರ್ಖಾನೆಗೆ ಹೋಗಲು ಮನೆ ಬಿಟ್ಟವರು ಕಾಣೆಯಾಗಿದ್ದು, ಅವರ ಪುತ್ರಿ ಶ್ರೀಮತಿ ರಾಜಮತಿ ಕೆ. ಇಂಗಳೆ ಅವರು ದಿನಾಂಕ ೨೯-೧೧-೮೯ರಂದು ಬೆಂಗಳೂರಿನ ತ್ಯಾಗರಾಜನಗರ ಪೋಲೀಸ್ ಠಾಣೆಯಲ್ಲಿ ೧೨೨/೮೯ನೇ ಸಂಖ್ಯೆಯಲ್ಲಿ ಪೊಕದ್ದಮೆ ದಾಖಲು ಮಾಡಿದ್ದು, ಈವರೆಗೂ ಅವರಂ ಪತ್ತೆಯಾಗಿರುವುದಿಲ್ಲ.

ಆದ್ದರಿಂದ, ಈ ಬಗ್ಗೆ ಜರೂರು ಕ್ರಮ ತೆಗೆದುಕೊಂಡು ಸದರಿಯವರ ಪತ್ತೆ ಮಾಡಿಸಬೇಕಾಗಿ ವಿನಂತಿಸುತ್ತೇನೆ.

೪ ಉಳ್ಳಾಲ ಗ್ರಾಮದ ಹತ್ತಿರ ಸಮುದ್ರ ಕೊರೆತಕ್ಕೆ ತಡೆಗೋಡೆ ಕಟ್ಟುವುದು

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಕಳೆದ ಮೂರು ವರ್ಷಗಳಿಂದ ಉಳ್ಳಾಲದಲ್ಲಿ ಸಮುದ್ರ ಕೊರತೆ ಎಡೆಬಿಡದೆ ನಡೆದಿದೆ. ೧೯೮೯ರಲ್ಲಿ ಆದಂತಹ ಕಡಲು ಕೊರೆತದಿಂದ ಇಡೀ ಉಳ್ಳಾಲದ ಹೆಚ್ಚಿನ ಕರಾವಳಿಯಲ್ಲಿ ಸುಮಾರು ೮೦೦ಕ್ಕೂ ಮಿಕ್ಕಿದ ಮನೆಗಳಂ ನೆಲಸಮವಾಗಿವೆ ನೂರಾರು ತೆಂಗಿನ ಮರಗಳು ಕೊಚ್ಚಿ ಹೋಗಿವೆ. ಮೀನಿನ ಶೆಡ್ಡುಗಳು ಸಂಪೂರ್ಣವಾಗಿ ಬಿದ್ದು ಹೋಗಿವೆ. ಬೋಟು ತಯಾರಿಸುವ ಕಾರ್ಖಾನೆಯೊಂದು ನೀರಂ ಪಾಲಾಗಿದೆ. ಲಕ್ಷಾಂತರ ರೂಪಾಯಿಗಳ ನಷ್ಟವಾಗಿದೆ. ಕಳೆದ ಮೂರು ವರ್ಷಗಳಿಂದ ಉಳ್ಳಾಲಕ್ಕೆ ಶಾಶ್ವತ ತಡೆಗೋಡೆ ರಚನೆ ಮಾಡಲು ಕೇಳುತ್ತಲೇ ಬಂದಿದ್ದೇನೆ. ಆದರೆ ಇನ್ನೂ ಕಾರ್ಯ ತೊಡಗಿಲ್ಲ. ಶಾಶ್ವತ ತಡೆಗೋಡೆ ಖಂಡಿತ ಮಾಡಿಕೊಡಲಾಗುವುದೆಂದು ಆಶ್ವಾಸನೆ ಹೇಳುತ್ತಾ ಬರಲಾಗಿದೆ. ಈ ವರ್ಷ ಶಾಶ್ವತ ತಡೆಗೋಡೆಗೆ ಕ್ರಮ ತೆಗೆದುಕೊಳ್ಳದೆ ಹೋದರೆ ಸಮುದ್ರ ಕೊರೆತದಿಂದ ಉಳ್ಳಾಲ ಗ್ರಾಮದ ಬಹು ಭಾಗ ಕೊಚ್ಚಿ ಹೋಗಬಹುದು ಆದ ಕಾರಣ ಈ ವರ್ಷ ಶೀಘ್ರವಾಗಿ ಶಾಶ್ವತ ತಡೆಗೋಡೆ ರಚನೆಯನ್ನು ಉಳ್ಳಾಲದಲ್ಲಿ ಪ್ರಾರಂಭಿಸುವಂತೆ ನೀರಾವರಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಅಧ್ಯಕ್ಷರೆ, ಮಾನ್ಯ ಇದಿನಬ್ಬರವರು ಪ್ರಸ್ತಾಪ ಮಾಡಿರತಕ್ಕ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ. ಈ ವಿಚಾರದ ಬಗ್ಗೆ ನಮ್ಮ ಬಂದರು ಮಂತ್ರಿಗಳ ಜೊತೆ ಚರ್ಚಿಸಿ ಅವರು ಹೇಳಿದಂಥ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ಕೈಗೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

೫ ಕೊಳ್ಳೇಗಾಲದ ರೇಷ್ಮೆ ಹುರಿ ಕಾರ್ಖಾನೆಯಲ್ಲಿ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಕೆಲಸಗಾರರಿಗೆ ಅಧಿಕಾರಿಗಳು ತೊಂದರೆ ಕೊಡುತ್ತಿರುವುದು

ಶ್ರೀ ಜಿ. ರಾಜುಗೌಡ (ಹನೂರು).— ಕೊಳ್ಳೇಗಾಲದ ರೇಷ್ಮೆ ಹುರಿ ಕಾರ್ಖಾನೆಯಲ್ಲಿ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಖಾಯಂ ಕೆಲಸಗಾರರನ್ನು ರೇಷ್ಮೆದಾರ ತೆಗೆಯುವ ಕಾರ್ಖಾನೆಗೆ ಹೋಗಿ ಕೆಲಸ ಮಾಡಲು ಆದೇಶ ಕೊಟ್ಟಾಗ, ಮೇಲ್ಕಂಡ ೨೯ ಕೆಲಸಗಾರರು, ನಾವು ರೇಷ್ಮೆ ದಾರವನ್ನು